# ಪರಿಸರ ಸ್ತ್ರೀವಾದ: ವಚನ ಸಾಹಿತ್ಯ

ರೇಖಾ ನೀರಲಗಿ*

DOI: https://doi.org/10.5281/zenodo.21438625

**ABSTRACT**

ಪಿತೃಪ್ರಧಾನ ವ್ಯವಸ್ಥೆಯಿಂದ ಪ್ರಕೃತಿ ಹಾಗೂ ಸ್ತ್ರೀಯರ ಮೇಲಾಗುವ ಶೋಷಣೆಯನ್ನು ವಿರೋಧಿಸುವ ಆಧುನಿಕ 'ಪರಿಸರ ಸ್ತ್ರೀವಾದ'ದ (Ecofeminism) ಮೂಲ ಆಶಯಗಳು ಹನ್ನೆರಡನೇ ಶತಮಾನದ ವಚನ ಸಾಹಿತ್ಯದಲ್ಲಿಯೇ ಅತ್ಯಂತ ಪ್ರಬಲವಾಗಿ ಅಭಿವ್ಯಕ್ತಗೊಂಡಿವೆ. ಅಭಿವೃದ್ಧಿಯ ಹೆಸರಿನಲ್ಲಿ ಪ್ರಕೃತಿಯನ್ನು ಕೇವಲ ವಸ್ತುವಾಗಿ ನೋಡುವ ಪ್ರಸ್ತುತ ಕಾಲಘಟ್ಟದಲ್ಲಿ, ಅಕ್ಕಮಹಾದೇವಿ ಮತ್ತು ಸತ್ಯಕ್ಕನಂತಹ ಶರಣೆಯರು ಪರಿಸರವನ್ನು ದೈವತ್ವ ಹಾಗೂ ಸೃಜನಶೀಲತೆಯ ಸಂಕೇತವಾಗಿ ಆರಾಧಿಸಿದ ಬಗೆಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಸ್ತ್ರೀ ಮತ್ತು ಪ್ರಕೃತಿಯ ನಡುವಿನ ಭಾವನಾತ್ಮಕ ಸಂಬಂಧ, ಸುಸ್ಥಿರ ಬದುಕು ಹಾಗೂ ಸಕಲ ಜೀವರಾಶಿಗಳ ಮೇಲಿನ ಕರುಣೆಯನ್ನು ಶರಣರ ವಚನಗಳು ಎತ್ತಿಹಿಡಿಯುತ್ತವೆ. ಜಾಗತಿಕ ತಾಪಮಾನ, ಯುದ್ಧಗಳು ಮತ್ತು ಪರಿಸರ ನಾಶದಿಂದಾಗಿ ಮಹಿಳೆಯರು ಹಾಗೂ ಪ್ರಕೃತಿ ಎದುರಿಸುತ್ತಿರುವ ಬಿಕ್ಕಟ್ಟುಗಳಿಗೆ, 800 ವರ್ಷಗಳ ಹಿಂದಿನ ವಚನಕಾರರ ತಾತ್ವಿಕ ನಿಲುವುಗಳು ಇಂದಿಗೂ ಹೇಗೆ ಪ್ರಬಲ 'ಪರಿಸರ-ಸ್ತ್ರೀವಾದಿ ಮ್ಯಾನಿಫೆಸ್ಟೋ' ಆಗಿ ಮಾರ್ಗದರ್ಶನ ನೀಡುತ್ತವೆ ಎಂಬುದನ್ನು ಚರ್ಚಿಸಲಾಗಿದೆ.

**KEYWORDS:** ಪರಿಸರ ಸ್ತ್ರೀವಾದ, ವಚನ ಸಾಹಿತ್ಯ, ಪಿತೃಪ್ರಧಾನ ವ್ಯವಸ್ಥೆ, ಸುಸ್ಥಿರ ಅಭಿವೃದ್ಧಿ.

## ಪ್ರಕೃತಿ ಶೋಷಣೆ:

ಪರಿಸರ ಸ್ತ್ರೀವಾದ ಎಂಬುದು ಪ್ರಕೃತಿ ಮತ್ತು ಸ್ತ್ರೀಯರ ನಡುವಿನ ಅವಿನಾಭಾವ ಸಂಬಂಧವನ್ನು ತಿಳಿಯುವ ಹಾಗೂ ತಿಳಿಸುವ ಸೈದ್ಧಾಂತಿಕ ಚಿಂತನೆಯಾಗಿದೆ. ಪಿತೃಪ್ರಧಾನ ವ್ಯವಸ್ಥೆಯು ಎಗ್ಗಿಲ್ಲದೆ ಹೇಗೆ ಪ್ರಕೃತಿಯನ್ನು ತನ್ನ ಲಾಭಕ್ಕಾಗಿ ಅತಿಯಾಗಿ ಬಳಸಿಕೊಳ್ಳುತ್ತದೆಯೋ ಹಾಗೆಯೇ ಸ್ತ್ರೀಯರನ್ನೂ ಶೋಷಿಸುತ್ತದೆ ಎಂಬುದು ಪರಿಸರ ಸ್ತ್ರೀವಾದದ ಮೂಲ ಆಶಯ. ಪಾಶ್ಚಿಮಾತ್ಯ ಅಭಿವೃದ್ಧಿ ಮಾದರಿಗಳು ಪ್ರಕೃತಿಯನ್ನು ಕೇವಲ ಲಾಭದ ವಸ್ತುವಾಗಿ ಕಾಣುತ್ತದೆ. ಆದರೆ ಭಾರತೀಯ ಪರಂಪರೆಯಲ್ಲಿ ಪ್ರಕೃತಿಯು ಮತ್ತು ಸ್ತ್ರೀ ಎರಡನ್ನೂ ಪೂಜ್ಯಭಾವದಿಂದ

* **ಡಾ. ರೇಖಾ ನೀರಲಗಿ,** ಸಹಾಯಕ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಗದಗ.

ಸೃಜನ ಮತ್ತು ಪೋಷಕ ಶಕ್ತಿಯಾಗಿ ಕಾಣುತ್ತೇವೆ. ಪರಿಸರ ಸ್ತ್ರೀವಾದ ಎನ್ನುವುದು ಆಧುನಿಕ ಪರಿಕಲ್ಪನೆ ಎಂದು ಭಾವಿಸಿದ ನಮಗೆ ಅದರ ಸುಳಿವು ಅತ್ಯಂತ ಆಳವಾಗಿ ಹಾಗೂ ಅರ್ಥಪೂರ್ಣವಾಗಿ ವಚನ ಸಾಹಿತ್ಯದಲ್ಲಿ ಮಿಳಿತವಾಗಿರುವುದು ಕಂಡುಬರುತ್ತದೆ. ಸುಮಾರು 800 ವರ್ಷಗಳ ಹಿಂದೆಯೇ ಆಧುನಿಕ ಪರಿಸರ ಸ್ತ್ರೀವಾದ ಹೊಂದಿದ ಧೋರಣೆಗಳನ್ನು ಅಂದಿನ ವಚನಕಾರರ, ವಚನಕಾರ್ತಿಯರ ವಚನಗಳಲ್ಲಿ ನಾವು ಕಾಣಬಹುದು. ಪರಿಸರ ಮತ್ತು ಸ್ತ್ರೀ ಇವರಿಬ್ಬರೂ ಶೋಷಣೆಗೆ ಒಳಗಾಗುವ ಬಗೆ ಹಾಗೂ ಅವರಿಬ್ಬರ ನಡುವಿನ ಅನ್ಯೋನ್ಯ ಅವಿನಾಭಾವ ಸಂಬಂಧವನ್ನು ವಚನಕಾರರು ಆ ಹೊತ್ತಿನಲ್ಲೇ ಗುರುತಿಸಿದ್ದರು.

12ನೇ ಶತಮಾನದ ಶರಣ, ಶರಣೆಯರು ಪ್ರಕೃತಿಯನ್ನು ಕೇವಲ ಭೌತಿಕ ವಸ್ತುವಾಗಿ ಕಾಣದೆ ಸ್ತ್ರೀತ್ವದ ಸಂಕೇತವಾಗಿ ಕಂಡರು. ವಚನಕಾರರು ಪ್ರಕೃತಿ ಮತ್ತು ಸ್ತ್ರೀ ಇಬ್ಬರೂ ಸೃಜನಶೀಲ, ಉತ್ಪಾದಕ ಶಕ್ತಿಗಳೆಂದು ಅತ್ಯಂತ ಗೌರವದಿಂದ ಕಂಡರು. ಮನುಷ್ಯ ಆದಿಯಾಗಿ ಪ್ರಕೃತಿಯಲ್ಲಿರುವ ಸಕಲ ಜೀವರಾಶಿಗಳ ಒಳಿತನ್ನು ಬಯಸುವುದೇ ಸ್ತ್ರೀವಾದ. ವಚನಗಳಲ್ಲಿ ದಯೆಯೇ ಧರ್ಮದ ಮೂಲ ಎಂಬ ತತ್ವವು ಈ ಅರಿವು, ದಯೆ ತೋರುವುದು ಕೇವಲ ಮನುಷ್ಯರಿಗೆ ಸೀಮಿತವಾಗಿಲ್ಲ ಪ್ರಾಣಿ, ಪಕ್ಷಿ, ಸಸ್ಯ ಸಂಕುಲಕ್ಕೂ ಅನ್ವಯಿಸುತ್ತದೆ. ಸ್ತ್ರೀವಾದ ಪ್ರತಿಪಾದಿಸುವ ಅರಿವು ಮತ್ತು ಪೋಷಕ ಗುಣಗಳನ್ನು ಶರಣ ಶರಣೆಯರ ವಚನಗಳಲ್ಲಿ ಕಾಣುತ್ತೇವೆ. ಈ ನಿಟ್ಟಿನಲ್ಲಿ ಅಕ್ಕಮಹಾದೇವಿ, ಸತ್ಯಕ್ಕ, ಅಲ್ಲಮ, ಜೇಡರ ದಾಸಿಮಯ್ಯ, ಮುಕ್ತಾಯಕ್ಕ ಪ್ರಮುಖರೆನಿಸುತ್ತಾರೆ.

ಪರಿಸರ ಸ್ತ್ರೀವಾದವು ಪಿತೃಪ್ರಧಾನ ವ್ಯವಸ್ಥೆಯು ಪ್ರಕೃತಿಯನ್ನು ಮತ್ತು ಸ್ತ್ರೀಯನ್ನು ತನ್ನ ಅಧಿಕಾರಕ್ಕೆ ಬಳಸಿಕೊಳ್ಳುವುದನ್ನು ವಿರೋಧಿಸುತ್ತದೆ. ಹಾಗೆಯೇ ಸಮಾಜದ ಕಟ್ಟುಪಾಡುಗಳನ್ನು ಮಟ್ಟಹಾಕಿ ಸ್ತ್ರೀಯರಿಗೆ ವಚನಕಾರರು ಬೆಂಬಲಿಸಿದರು. ಅಕ್ಕಮಹಾದೇವಿ ತನ್ನ ಶಾರೀರಿಕ ನಗ್ನತೆಯನ್ನು ತೋರಿಸಿ ಪ್ರಕೃತಿಯನ್ನೇ ತನ್ನ ಉಡುಪಾಗಿಸಿ, ಪ್ರಕೃತಿಯನ್ನೇ ತನ್ನ ನಿರ್ವಾಣದ ಹಾದಿಯಾಗಿ ಸ್ವೀಕರಿಸಿದಳು. ಪ್ರಕೃತಿ ಕೇವಲ ಜಡ ವಸ್ತುವಾಗಿರಲಿಲ್ಲ, ಅದು ಅವಳ ಆರಾಧ್ಯ ದೈವ ಚೆನ್ನಮಲ್ಲಿಕಾರ್ಜುನನ ರೂಪವಾಗಿತ್ತು. "ಗಿಡಮರ ಬಳ್ಳಿಗಳೆಲ್ಲವೂ ನೀವು, ಪಶುಪಕ್ಷಿ ಮೃಗಗಳೆಲ್ಲವೂ ನೀವು, ಸಕಲ ಲೋಕವೆಲ್ಲವೂ ನೀವು" ಎನ್ನುವ ಮೂಲಕ ಅಕ್ಕ ಪ್ರಕೃತಿಯಲ್ಲಿ ಪರಮಾತ್ಮನನ್ನು ಕಾಣುತ್ತಾಳೆ. ಇಲ್ಲಿ ಸ್ತ್ರೀ ಮತ್ತು ಪರಿಸರ ಒಂದೇ ಎಂಬ ಅನನ್ಯತೆ ವ್ಯಕ್ತವಾಗುತ್ತದೆ. ಸ್ತ್ರೀವಾದದ ಮೂಲ ಆಶಯವು ಅಕ್ಕನ ವಚನಗಳಲ್ಲಿ ಎದ್ದು ಕಾಣುತ್ತದೆ. ಅವಳು ಪ್ರಕೃತಿಯನ್ನು ಪೂಜ್ಯ ಭಾವದಿಂದಲೂ ಪ್ರಕೃತಿಯ ಪ್ರತಿ ಕಣದಲ್ಲೂ ದೈವತ್ವವನ್ನು ಕಾಣುತ್ತಾಳೆ. ಶಾರೀರಿಕ ಸುಖ-ಸಂಪತ್ತು ಅರಮನೆ ವೈಭೋಗವನ್ನು ತೊರೆದು ಹೊರಟಾಗ ಅವಳಿಗೆ ಆಸರೆ ನೀಡಿದ್ದು ಸಮಾಜವಲ್ಲ ಬದಲಾಗಿ ಕಾಡು, ಬೆಟ್ಟ ಗವಿಗಳು, ಮೃಗ ಪಕ್ಷಿಗಳು ಅವಳಿಗೆ ಆಪ್ತ ಗೆಳೆಯರಾದರು. ಸ್ತ್ರೀ ಮತ್ತು ಪ್ರಕೃತಿ ಇಬ್ಬರೂ ಪಿತೃಪ್ರಧಾನ ವ್ಯವಸ್ಥೆಯ ದಮನಕ್ಕೆ, ಶೋಷಣೆಗೆ ಒಳಗಾಗುತ್ತಾರೆ ಎಂಬುದು ಪರಿಸರ ಸ್ತ್ರೀವಾದದ ವಾದ. ಅಕ್ಕಮಹಾದೇವಿ ಈ ಶೋಷಣೆಯಿಂದ ಬಿಡುಗಡೆ ಪಡೆಯಲು ಪ್ರಕೃತಿಯ ಮಡಿಲನ್ನು ಆಶ್ರಯಿಸುತ್ತಾಳೆ. ಪರಿಸರ ಸ್ತ್ರೀವಾದವು ಜೀವರಾಶಿಗಳ ಮೇಲಿನ ದಯೆಯನ್ನು ಪ್ರತಿಪಾದಿಸುತ್ತದೆ. ಅಕ್ಕ ತನ್ನ ವಚನಗಳಲ್ಲಿ ಪ್ರಾಣಿ-ಪಕ್ಷಿಗಳನ್ನೇ ತನ್ನ ಗೆಳೆಯ ಗೆಳತಿಯರಂತೆ ಭಾವಿಸಿ ಅವುಗಳೊಡನೆ ಬೆರೆತು ಕರುಣೆ, ಅಹಿಂಸೆ ಮತ್ತು ಸಕಲ ಜೀವರಾಶಿಗಳ ಮೇಲಿನ ಪ್ರೇಮವನ್ನು ಬಿತ್ತಿ ಹೋಗಿದ್ದಾಳೆ.

ಮನುಷ್ಯನೇ ಶ್ರೇಷ್ಠ ಎಂಬ ಅಹಂಕಾರವನ್ನು ಅಕ್ಕ ಅಲ್ಲಗೆಳೆಯುತ್ತಾಳೆ. ಪ್ರಕೃತಿಯ ಮುಂದೆ ಮನುಷ್ಯ ಕೇವಲ ಒಂದು ಭಾಗ ಎಂದು ಸಾರುತ್ತಾಳೆ. ಪ್ರಕೃತಿ ಕೇವಲ ಹಿನ್ನೆಲೆಯಲ್ಲ

ಮನುಷ್ಯ ಜೀವನದಲ್ಲಿ ಅದು ಪ್ರಧಾನ ಪಾತ್ರ ನಿರ್ವಹಿಸುತ್ತದೆ ಎಂದು ಸಾರಿದಳು. ಮನುಷ್ಯ ಪ್ರಕೃತಿಗೆ ನಮ್ಯತ್ವದಿಂದ ಅದರೊಂದಿಗೆ ಸಹಬಾಳ್ವೆ ಮಾಡಬೇಕೆಂದು ಹೇಳಿದ್ದಾಳೆ.

"ಬೆಟ್ಟದ ಮೇಲೊಂದು ಮನೆಯ ಮಾಡಿ" ಪರಿಸರದ ಸೀಮೆಯೊಳಗಿನ ಮೃಗಗಳು, ಗಾಳಿ ಮಳೆಯನ್ನು ಎದುರಿಸುತ್ತಾ ಮನುಷ್ಯ ಪ್ರಕೃತಿಯೊಂದಿಗೆ ಹೊಂದಿಕೊಂಡು ಬದುಕುವುದು ಅನಿವಾರ್ಯವೆಂದು ಈ ವಚನಗಳು ಸಾರುತ್ತವೆ. ಚಿಪ್ಕೋ ಚಳುವಳಿ ಅಥವಾ ಇಂದಿನ ಪರಿಸರ ಹೋರಾಟಗಳಲ್ಲಿ ಮಹಿಳೆಯರ ಪಾತ್ರ ದೊಡ್ಡದಾಗಿದೆ. ಇದಕ್ಕೆ 800 ವರ್ಷಗಳ ಹಿಂದೆಯೇ ಅಕ್ಕಮಹಾದೇವಿ ಮುನ್ನುಡಿ ಬರೆದಿದ್ದರು. ಮನುಷ್ಯ ಬದುಕಿನಲ್ಲಿ ಪ್ರಕೃತಿ ಪ್ರಧಾನ ಪಾತ್ರವಹಿಸುತ್ತದೆ. ಅದು ಮನುಷ್ಯರೊಂದಿಗೆ ಒಂದು ಅವಿನಾಭಾವ ಸಂಬಂಧವನ್ನು ಹೊಂದಿದೆ ಎಂದು ತಮ್ಮ ವಚನಗಳಲ್ಲಿ ಸಾರಿದ್ದಾರೆ. ಅಕ್ಕಮಹಾದೇವಿಯ ಸೃಷ್ಟಿಯಲ್ಲಿ 'ಹೆಣ್ಣು' ಮತ್ತು 'ಮಣ್ಣು' ಅಂದರೆ ಪ್ರಕೃತಿ ಎರಡೂ ಸೃಜನಶೀಲತೆಯ ಸಂಕೇತಗಳು. ಪ್ರಕೃತಿಯನ್ನು ಈ ಹೊತ್ತಿನಲ್ಲಿ ಶರಣರು ಗೌರವಿಸುವುದೇ ನಿಜವಾದ ಆಧ್ಯಾತ್ಮ ಮತ್ತು ಸ್ತ್ರೀವಾದ ಎಂದು ಅವರು ಅಂದೇ ನಿರೂಪಿಸಿದ್ದಾರೆ. ಅಕ್ಕಮಹಾದೇವಿ ಕೇವಲ ಒಬ್ಬ ಧಾರ್ಮಿಕ ಮಹಿಳೆಯಲ್ಲ ಅವಳು ಈ ದೇಶದ ಮೊದಲ ಪರಿಸರ ಸ್ತ್ರೀವಾದಿ ಎನ್ನಬಹುದು. ಅಕ್ಕನ ವಚನಗಳು ಮನುಷ್ಯನಿಗೆ ಬದುಕುವ ಹಾದಿ ಮತ್ತು ಪ್ರಕೃತಿಯನ್ನು ಪ್ರೀತಿಸುವ ರೀತಿ ಎರಡನ್ನೂ ಕಲಿಸಿಕೊಡುತ್ತವೆ.

ಶರಣೆ ಸತ್ಯಕ್ಕ ಕಾಡಿನಿಂದ ಕಟ್ಟಿಗೆ ತರುವ ಕಾಯಕ ಮಾಡುವವಳು. ಅವಳು ಒಣಗಿದ, ಮುರಿದು ಕೆಳಗೆ ಬಿದ್ದ ಕಟ್ಟಿಗೆಗಳನ್ನು ತರುತ್ತಿದ್ದಳೇ ಹೊರತು ಇಂದಿನಂತೆ ಕಾಡನ್ನು ಲೂಟಿ ಮಾಡಲಿಲ್ಲ. ಇದು ಇಂದಿನ "ಸುಸ್ಥಿರ ಅಭಿವೃದ್ಧಿ" ಮತ್ತು ಸ್ತ್ರೀವಾದದ ಮೂಲ ಆಶಯವಾಗಿದೆ.

**"ಕಾನನವೆಲ್ಲ ಎನ್ನ ತಂದೆ ತಾಯಿಗಳು**
**ಗಿಡಮರಗಳೆಲ್ಲ ಎನ್ನ ಬಂಧು ಬಳಗಗಳು"**

ಸತ್ಯಕ್ಕ ಕಾಡನ್ನು ತಂದೆ-ತಾಯಿ ಎಂದು ಕರೆಯುವ ಮೂಲಕ ಪ್ರಕೃತಿಯೊಂದಿಗೆ ಒಂದು ಅವಿನಾಭಾವ ಭಾವನಾತ್ಮಕ ಸಂಬಂಧವನ್ನು ಹೊಂದಿರುವ ಹಾಗೂ ಪ್ರಕೃತಿಯನ್ನು ಶೋಷಿಸುವ ವಸ್ತುವಾಗದೆ ಗೌರವಿಸುವ 'ಸ್ತ್ರೀ ಸಹಜ' ಸಂವೇದನೆಯನ್ನು ಪ್ರತಿಪಾದಿಸುತ್ತಾಳೆ.

ಪರಿಸರ ಸ್ತ್ರೀವಾದವು ಪುರುಷ ಪ್ರಧಾನ ಸಂಸ್ಕೃತಿಯು ಪ್ರಕೃತಿಯನ್ನು ನಿಯಂತ್ರಿಸಲು ಪ್ರಯತ್ನಿಸುವುದನ್ನು ವಿರೋಧಿಸುತ್ತದೆ. ಜೇಡರ ದಾಸಿಮಯ್ಯನವರು ಕೂಡ ಈ ಅಂಶವನ್ನು ತಮ್ಮ ವಚನಗಳಲ್ಲಿ ಹೇಳಿದ್ದಾರೆ. ಜೇಡರ ದಾಸಿಮಯ್ಯನ ವಚನವೊಂದರಲ್ಲಿ "ತಲೆ ಮೊಳೆತಡೆ ಗಂಡೆಂಬರು ಮೊಲೆ ಮೊಳೆತಡೆ ಹೆಣ್ಣೆಂಬರು ನಡುವೆ ಸುಳಿವ ಆತ್ಮನು ಗಂಡೂ ಅಲ್ಲ ಹೆಣ್ಣೂ ಅಲ್ಲ" ಎನ್ನುತ್ತಾರೆ. ಇಲ್ಲಿ 'ಆತ್ಮ' ಎಂಬುದು ಪ್ರಕೃತಿಯಂತೆ ನಿರ್ವಿಕಾರವಾದುದು ಗಂಡು-ಹೆಣ್ಣು ಎಂಬ ಭೇದವನ್ನು ಪ್ರಕೃತಿ ಮಾಡುವುದಿಲ್ಲ ಅದನ್ನು ಸಮಾಜ ಮಾಡುತ್ತದೆ ಎಂಬ ಪರಿಸರ ಸ್ತ್ರೀವಾದದ ಅಂಶವು ಇದರಲ್ಲಿ ಅಡಕವಾಗಿದೆ.

ವಚನ ಸಾಹಿತ್ಯದಲ್ಲಿ ಪರಿಸರ ಸ್ತ್ರೀವಾದವು ಮರವನ್ನು ಕಡಿಯುವುದು ಎಂದರೆ ಒಂದು ಜೀವವನ್ನು ಹಾನಿ ಮಾಡುವುದು ಮಾತ್ರವಲ್ಲ ಅದು ವಿಶ್ವಮಾತೆಯ ಒಂದು ಅಂಗವನ್ನು ಕತ್ತರಿಸಿದಂತೆ ಎಂಬ ಉನ್ನತ ಭಾವನೆ ಶರಣ, ಶರಣೆಯರ ವಚನಗಳಲ್ಲಿ ಕಾಣಬಹುದು. ಇಂದಿನ ಜಾಗತಿಕ ತಾಪಮಾನ ಮತ್ತು ಪರಿಸರ ನಾಶಕ್ಕೆ 800 ವರ್ಷಗಳ ಹಿಂದಿನ ಈ ವಚನಗಳು ಅತ್ಯಂತ ಪ್ರಬಲವಾದ "ಪರಿಸರ-ಸ್ತ್ರೀವಾದಿ ಮ್ಯಾನಿಫೆಸ್ಟೋ" ಗಳಂತೆ ಕಾಣುತ್ತವೆ.

ಇತ್ತೀಚಿನ ರಷ್ಯಾ–ಉಕ್ರೇನ್ ಅಥವಾ ಮಧ್ಯಪ್ರಾಚ್ಯದಂತಹ ಯುದ್ಧಗಳು ಕೇವಲ ಎರಡು ದೇಶಗಳ ನಡುವಿನ ಸಂಘರ್ಷವಾಗಿರದೆ, ಅವು ಇಡೀ ಜೀವಸಂಕುಲ ಮತ್ತು ಪ್ರಕೃತಿಯ ಮೇಲೆ ಬೀರುತ್ತಿರುವ ಪರಿಣಾಮಗಳು ಎಷ್ಟು ಭಯಾನಕವೋ ಅಷ್ಟೇ ಭಯಾನಕವಾದ ಪರಿಣಾಮವನ್ನು ಸ್ತ್ರೀಯರ ಮೇಲೂ ಬೀರುತ್ತವೆ. ಇಂದಿನ ಯುದ್ಧಗಳಲ್ಲಿ ಬಳಸುವ ರಾಸಾಯನಿಕ ಅಸ್ತ್ರಗಳು, ಮಿಸೈಲ್ ಪರೀಕ್ಷೆಗಳು ಮತ್ತು ಬಾಂಬ್ ಸ್ಫೋಟಗಳು ಕೇವಲ ಮನುಷ್ಯರನ್ನಷ್ಟೇ ಅಲ್ಲದೆ, ಸಾವಿರಾರು ಎಕರೆ ಅರಣ್ಯ, ಪ್ರಾಣಿ–ಪಕ್ಷಿ ಮತ್ತು ಫಲವತ್ತಾದ ಮಣ್ಣನ್ನು ನಾಶಪಡಿಸುತ್ತಿವೆ. ಇದು ಶರಣರು ಕಂಡ "ಸಕಲ ಜೀವರಾಶಿಗಳ ಒಳಿತು" ಎಂಬ ತತ್ವಕ್ಕೆ ವಿರುದ್ಧವಾದದ್ದು. ಯುದ್ಧವು ಪ್ರಕೃತಿಯನ್ನು ಕೇವಲ ಒಂದು "ಯುದ್ಧಭೂಮಿ"ಯಾಗಿ (ವಸ್ತುವಾಗಿ) ನೋಡುತ್ತದೆಯೇ ಹೊರತು, ಪೂಜ್ಯ ಭಾವನೆಯಿಂದಲ್ಲ. ಸ್ತ್ರೀಯನ್ನು ಕೂಡ ಇದೇ ಮಾದರಿಯಲ್ಲಿ ಅವಲೋಕಿಸುತ್ತದೆ. ಪ್ರಕೃತಿಯ ದೇಹ ಮತ್ತು ಸ್ತ್ರೀಯ ದೇಹವನ್ನು ಯುದ್ಧ ರಂಗಭೂಮಿಯಾಗಿ ಪರಿವರ್ತಿಸುವುದು ವರ್ತಮಾನದ ಆತಂಕಕ್ಕೆ ಕಾರಣವಾಗಬಲ್ಲದು. ಪರಿಣಾಮವಾಗಿ, ಯುದ್ಧದ ಸಂದರ್ಭದಲ್ಲಿ ಅತಿ ಹೆಚ್ಚು ಹಿಂಸೆ, ವಲಸೆ ಮತ್ತು ಅಸುರಕ್ಷತೆಗೆ ಒಳಗಾಗುವವರು ಮಹಿಳೆಯರು. ಯುದ್ಧದಲ್ಲಿ, ಯುದ್ಧಕ್ಕಾಗಿ ಸಂಪನ್ಮೂಲಗಳನ್ನು ಲೂಟಿ ಮಾಡುವುದು ಪ್ರಕೃತಿಯ ಮೇಲಿನ ಶೋಷಣೆ. ಅಕ್ಕಮಹಾದೇವಿ ಅರಮನೆಯ ಅಧಿಕಾರಶಾಹಿಯನ್ನು ಧಿಕ್ಕರಿಸಿ ಪ್ರಕೃತಿಯಲ್ಲಿ ಶಾಂತಿ ಹುಡುಕಿದಳು. ಆದರೆ ಇಂದಿನ ಯುದ್ಧಗಳು ಮನುಷ್ಯನ ಅಹಂಕಾರಕ್ಕಾಗಿ ಆ "ಶಾಂತಿಯುತ ಪ್ರಕೃತಿ"ಯನ್ನೂ ಸುಟ್ಟು ಭಸ್ಮ ಮಾಡುತ್ತಿವೆ. ಇವು "ಪರಿಸರ–ಸ್ತ್ರೀವಾದಿ ಮ್ಯಾನಿಫೆಸ್ಟೋ"ದ ಅನಿವಾರ್ಯತೆಯನ್ನು ಇಂದಿನ ಜಗತ್ತಿಗೆ ನೆನಪಿಸುತ್ತಿವೆ.

**ಪರಾಮರ್ಶನ ಗ್ರಂಥಗಳು:**


1. ಕಲಬುರ್ಗಿ ಎಂ. ಎಂ. (ಪ್ರಧಾನ ಸಂ.), (1993), ಸಮಗ್ರ ವಚನ ಸಂಪುಟಗಳು, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ.
2. ಬಸವರಾಜು ಎಲ್. (ಸಂ.), (1998), ಅಕ್ಕಮಹಾದೇವಿ ವಚನ ಸಂಪುಟ, ಮೈಸೂರು: ಗೀತಾ ಬುಕ್ ಹೌಸ್.
3. ಹಿರೇಮಠ ಆರ್. ಸಿ. (ಸಂ.), (1968), ಶಿವಶರಣೆಯರ ವಚನಗಳು, ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
4. ವಿವಿಧ ಲೇಖಕರು / ಮಹಿಳಾ ಅಧ್ಯಯನ ವಿಭಾಗ (ಸಂ.), (2006), ಪರಿಸರ ಸ್ತ್ರೀವಾದ ಮತ್ತು ಮಹಿಳಾ ಚಳುವಳಿಗಳು (ಸಂಶೋಧನಾ ಲೇಖನಗಳು), ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
5. ಶ್ರೀಮತಿ ಎಚ್. ಎಸ್., (2001), ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
6. Ecofeminism, Maria Mies And Vandana Shiva, Rawat Publications, Jaipur.
7. Staying Alive: Women, Ecology, And Development, Vandana Shiva, Zed Books, London.